# ಸಮಗ್ರ ಶಿಕ್ಷಣ ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರು ಕಛೇರಿ, ಹೊಸ ಸಾರ್ವಜನಿಕ ಕಛೇರಿ
ಪೂರಕ ಕಟ್ಟಡಗಳು ಕೆ.ಆರ್.ಸರ್ಕಲ್, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ: ಸಶಿಕ/ಒಒಎಸ್‌ಸಿ/AWP&B/ಸುತ್ತೋಲೆಗಳು/2018-19 ದಿನಾಂಕ: 28-11-2019

## ಜ್ಞಾಪನ

ವಿಷಯ: ಗೈರು ಹಾಜರಾದ ಮಕ್ಕಳನ್ನು ಮರಳಿ ಶಾಲೆಗೆ ತರಲು ಪೋಷಕರಿಗೆ ಮತ್ತು ಮಕ್ಕಳ ಕಲ್ಯಾಣ ಸಮಿತಿಗೆ ದೂರು ದಾಖಲಿಸಿ ವರದಿ ನೀಡುವ ಬಗ್ಗೆ.

ಉಲ್ಲೇಖ: 1. ದಿನಾಂಕ 07.11.2019 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಅಂತರ ಇಲಾಖಾ ಸಮಿತಿ ಸಭೆಯಲ್ಲಿ ಮುಖ್ಯ ಕಾರ್ಯದರ್ಶಿಗಳು ನೀಡಿದ ನಿರ್ದೇಶನದಂತೆ.

2. ದಿನಾಂಕ 13-11-2019 ರಂದು ಉಚ್ಚ ನ್ಯಾಯಾಲಯದಲ್ಲಿ ನಡೆದ ವಿಚಾರಣೆಯಲ್ಲಿ ನ್ಯಾಯಾಧೀಶರು ನೀಡಿರುವ ನಿರ್ದೇಶನದಂತೆ.

*********

ದಿನಾಂಕ 15.03.2019 ರಂದು ಸರ್ಕಾರದ ಅಧಿಸೂಚನೆಯಂತೆ ತಾಲ್ಲೂಕು ಹಂತದ ಶಿಕ್ಷಣ ಸಂಯೋಜಕರನ್ನು ಹಾಜರಾತಿ ಪ್ರಾಧಿಕಾರವಾಗಿ ನೇಮಿಸಿ ಅದೇಶಿಸಲಾಗಿದೆ. **ನ್ಯಾಯಾಲಯದ ನಿರ್ದೇಶನದಂತೆ ಹಾಜರಾತಿ ಪ್ರಾಧಿಕಾರವು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳ ಮಕ್ಕಳ ಹಾಜರಾತಿ ಮತ್ತು ದಾಖಲಾತಿಯ ಮಾಹಿತಿಯನ್ನು ಹೊಂದಿರಬೇಕಾಗುತ್ತದೆ.** ಹಾಜರಾತಿ ಪ್ರಾಧಿಕಾರವು ಸಕ್ರಿಯವಾಗಿ ಕಾರ್ಯ ನಿರ್ವಹಿಸಲು ದಿನಾಂಕ 17-08-2019 ರಂದು ರಾಜ್ಯಮಟ್ಟದ ಸಂಪನ್ಮೂಲ ವ್ಯಕ್ತಿಗಳಿಗೆ ಮತ್ತು ದಿನಾಂಕ 21-08-2019 ರಂದು ಜಿಲ್ಲಾಮಟ್ಟದ ಶಿಕ್ಷಣ ಸಂಯೋಜಕರಿಗೆ ತರಬೇತಿಯನ್ನು ಡಿಎಸ್‌ಇಆರ್‌ಟಿ ವತಿಯಿಂದ ಸಹ ನೀಡಲಾಗಿದೆ.

ಪ್ರತಿವಾರ ಹಾಜರಾತಿ ಪ್ರಾಧಿಕಾರದಿಂದ ಗೈರು ಹಾಜರಾದ ಮಕ್ಕಳ ಮಾಹಿತಿಯನ್ನು ದಿನಾಂಕ 17-08-2019 ರಿಂದ ಪಡೆಯಲಾಗುತ್ತಿದೆ. **ಪ್ರತಿವಾರ ಜಿಲ್ಲೆಗಳಿಂದ ಪಡೆಯಲಾದ ಅಂಕಿಅಂಶಗಳನ್ನು ರಾಜ್ಯ ಹಂತದಲ್ಲಿ ವಿಶ್ಲೇಷಿಸಿದಾಗ ಗೈರು ಹಾಜರಾದ ಮಕ್ಕಳನ್ನು ಶಾಲೆಗೆ ಮರಳಿ ತರುವಲ್ಲಿ ನಿರೀಕ್ಷಿತ ಪ್ರಗತಿ ಕಂಡು ಬರುತ್ತಿಲ್ಲ. ತಾಲ್ಲೂಕುಗಳಿಂದ ಬರುವ ಮಾಹಿತಿಯ ಪೂರ್ವ ಪರಿಶೀಲನೆಯಿಲ್ಲದೆ ಯಥಾವತ್ತಾಗಿ ಮಾಹಿತಿಯನ್ನು ರಾಜ್ಯ ಕಛೇರಿಗೆ ಸಲ್ಲಿಸಲಾಗುತ್ತಿದೆ. ಜಿಲ್ಲೆಗಳಿಂದ ಬಂದ ಮಾಹಿತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದಾಗ ನ್ಯಾಯಾಧೀಶರು ಸೂಕ್ಷ್ಮವಾಗಿ ಪರಿಶೀಲನೆ ಮಾಡಿರುತ್ತಾರೆ. ಕೆಲವು ಜಿಲ್ಲೆಗಳು ಶೂನ್ಯ ವರದಿಯನ್ನು ನೀಡಿರುವುದರ ಬಗ್ಗೆ ನ್ಯಾಯಾಲಯ ಆಕ್ಷೇಪ ವ್ಯಕ್ತಪಡಿಸಿರುತ್ತದೆ.**

**ಪ್ರತಿವಾರ ಗುರುತಿಸಲಾದ ಗೈರು ಹಾಜರಾದ ಮಕ್ಕಳ ಎಲ್ಲಾ ಪೋಷಕರಿಗೆ ಕಡ್ಡಾಯವಾಗಿ ಹಾಜರಾತಿ ಪ್ರಾಧಿಕಾರದಿಂದ ನೋಟೀಸ್ ಜಾರಿಯಾಗತಕ್ಕದ್ದು. ದಿನಾಂಕ 16-11-2019 ರಂದು ನೀಡಲಾದ ಗೈರು ಹಾಜರಾದ ಮಕ್ಕಳ ಮಾಹಿತಿಯಲ್ಲಿ ಬಾಗಲಕೋಟೆ, ಚಿಕ್ಕೋಡಿ, ಬೀದರ್, ದಕ್ಷಿಣ ಕನ್ನಡ ಜಿಲ್ಲೆಗಳು ನೋಟೀಸ್ ಜಾರಿ ಮಾಡದಿರುವುದು ಕಂಡು ಬಂದಿರುತ್ತದೆ.**

www.ksge.in

ಗೈರು ಹಾಜರಾದ ಮಕ್ಕಳ ಪೋಷಕರಿಗೆ ನೋಟೀಸ್ ಜಾರಿಯಾದ ನಂತರ ಅನುಪಾಲನೆ ನಡೆಸಿ, ಮಗುವನ್ನು ಮರಳಿ ಶಾಲೆಗೆ ಕರೆತರಲು ಹಾಜರಾತಿ ಪ್ರಾಧಿಕಾರ ಕ್ರಮವಹಿಸತಕ್ಕದ್ದು, ಪೋಷಕರು ನಿರಾಕರಿಸಿದಲ್ಲಿ ಮಕ್ಕಳ ಕಲ್ಯಾಣ ಸಮಿತಿ ದೂರು ದಾಖಲಿಸುವುದು. **ಮಕ್ಕಳ ಕಲ್ಯಾಣ ಸಮಿತಿಗೆ ರಾಜ್ಯದ ಬೆಂಗಳೂರು ಗ್ರಾ. ಜಿಲ್ಲೆ, ಚಿಕ್ಕಾಬಳ್ಳಾಪುರ, ದಾವಣಗೆರೆ, ಹಾಸನ, ಮೈಸೂರು, ರಾಮನಗರ, ಶಿವಮೊಗ್ಗ, ಉಡುಪಿ, ಉತ್ತರ ಕನ್ನಡ ಮತ್ತು ಶಿರಸಿ**

ಜಿಲ್ಲೆಗಳು ಮಾತ್ರ ದೂರು ದಾಖಲಿಸಿರುವುದು ಕಂಡು ಬಂದಿರುತ್ತದೆ. (ಪೋಷಕರಿಗೆ ನೀಡಿದ ನೋಟೀಸ್‌ನ್ನು ಸಿಡಬ್ಲ್ಯೂಸಿಗೆ ನೀಡಿದ ದೂರು ಎಂದು ಪರಿಗಣಿಸಲು ಅವಕಾಶವಿರುವುದಿಲ್ಲ) ಇತರೆ ಜಿಲ್ಲೆಗಳು ಶೂನ್ಯ ವರದಿ ನೀಡಿರುವುದು ಕಂಡು ಬಂದಿರುತ್ತದೆ. ದಿನಾಂಕ 07-11-2019 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಅಂತರ ಇಲಾಖಾ ಸಮಿತಿ ಸಭೆಯಲ್ಲಿ ಸಹ ಮಕ್ಕಳ ಕಲ್ಯಾಣ ಸಮಿತಿಗೆ ದೂರು ದಾಖಲಿಸದಿರುವ ಬಗ್ಗೆ ಪರಿಶೀಲನೆ ನಡೆಸಲು ಸೂಚಿಸಲಾಗಿದೆ.

ಪ್ರತಿವಾರ ಗೈರು ಹಾಜರಾದ ಮಕ್ಕಳ ಮಾಹಿತಿಯನ್ನು ದಾಖಲೆ ಸಹಿತ ಜಿಲ್ಲೆಗಳಲ್ಲಿ ಪರಿಶೀಲಿಸಿ ನಂತರ ವರದಿಯನ್ನು ಶನಿವಾರವೇ ರಾಜ್ಯ ಯೋಜನಾ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು. ಕೆಲವು ಜಿಲ್ಲೆಗಳು ದೂರವಾಣಿ ಕರೆ ಮಾಡಿ ಸಲ್ಲಿಸುವಂತೆ ತಿಳಿಸಿದರು ಸಹ ವಿಳಂಬವಾಗಿ ಸಲ್ಲಿಸುತ್ತಿರುವುದು ಕಂಡು ಬರುತ್ತಿದೆ.

ದಿನಾಂಕ 13-11-2019 ರಂದು ನ್ಯಾಯಾಲಯದಲ್ಲಿ ನಡೆದ ವಿಚಾರಣೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳು ಮತ್ತು ಪ್ರತಿವಾರ ಸಲ್ಲಿಕೆಯಾಗುತ್ತಿರುವ ಗೈರು ಹಾಜರಾದ ಮಕ್ಕಳ ಮಾಹಿತಿಯನ್ನು ಪರಿಶೀಲನೆ ನಡೆಸುವಂತೆ ನ್ಯಾಯಾಲಯವು ಸೂಚಿಸಿರುತ್ತದೆ. ತಾವು ಸಲ್ಲಿಸುವ ಮಾಹಿತಿಯು ಹೊಂದಾಣಿಕೆಯಾಗುವ ಬಗ್ಗೆ ಪೂರ್ವ ಪರಿಶೀಲನೆ ನಡೆಸಿ ಉಪನಿರ್ದೇಶಕರು ಧೃಢೀಕೃತ ಪ್ರತಿಯನ್ನು ಒದಗಿಸುವುದು. ತಪ್ಪು ಮಾಹಿತಿಯನ್ನು ಒದಗಿಸಿದಲ್ಲಿ ಜಿಲ್ಲೆಯ ಸಂಬಂಧಪಟ್ಟ ಅಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ. ಈ ವಿಷಯವನ್ನು ಉಪನಿರ್ದೇಶಕರು ಗಮನದಲ್ಲಿರಿಸಿ ಕಾಲಕಾಲಕ್ಕೆ ಪರಿಶೀಲನೆ ನಡೆಸಿ ವರದಿ ನೀಡುವುದು.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ-ಕರ್ನಾಟಕ
ಬೆಂಗಳೂರು

ಪ್ರತಿಯನ್ನು ಗೌರವಪೂರ್ವಕವಾಗಿ:

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲ್ಬುರ್ಗಿ ಮತ್ತು ಬೆಳಗಾಂ ವಿಭಾಗ.
4. ಶ್ರೀಮತಿ. ಕಾತ್ಯಾಯಿನಿ ಚಾಮರಾಜ್, ಸಿವಿಕ್ ಸೊಸೈಟಿ, ಬೆಂಗಳೂರು.

ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ:

5. ಸಂಬಂಧಿಸಿದ ಎಲ್ಲಾ ಜಿಲ್ಲೆಯ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ----ಜಿಲ್ಲೆ.
6. ಸಂಬಂಧಿಸಿದ ಎಲ್ಲಾ ಜಿಲ್ಲೆಯ ಉಪಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಾ------ಜಿಲ್ಲೆ.
7. ಸಂಬಂಧಿಸಿದ ಎಲ್ಲಾ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳು.
8. ಸಂಬಂಧಿಸಿದ ಎಲ್ಲಾ ಜಿಲ್ಲೆಯ ಶಿಕ್ಷಣ ಸಂಯೋಜಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ.
9. ಕಛೇರಿ ಪ್ರತಿ

www.ksge.in